ದಿ: 30/3/22
ನಿ-330
ಕ್ರ-126

**ಶ್ರೀಯುತರುಗಳಾದ ಲಕ್ಷ್ಮಣ ಸಂಗಪ್ಪ ಸವದಿ, ಡಾ॥ ವೈ.ಎ. ನಾರಾಯಣಸ್ವಾಮಿ, ಮಾನ್ಯ ಸರ್ಕಾರಿ ಮುಖ್ಯ ಸಚೇತಕರು ಮತ್ತು ಶ್ರೀಮತಿ ಭಾರತಿ ಶೆಟ್ಟಿ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳು ನಿಯಮ 330 ಅಡಿಯಲ್ಲಿ ಸಲ್ಲಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಉತ್ತರ :**

ವಿಷಯ:-

ಗಿಡಮೂಲಿಕೆಗಳ ಸಹಾಯದಿಂದ ದಿವ್ಯ ಔಷಧಿಗಳನ್ನು ತಯಾರಿಸಿ ಅನೇಕ ಖಾಯಿಲೆಗಳಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯರುಗಳಿಗೆ ಮುಕ್ತವಾಗಿ ಸೇವೆ ಸಲ್ಲಿಸಲು ಪ್ರಮಾಣ ಪತ್ರ ನೀಡುವ ಬಗ್ಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಗಮನ ಸೆಳೆಯಬಯಸುತ್ತೇನೆ.

********

ಉತ್ತರ:-

ಭಾರತೀಯ ವೈದ್ಯ ಪದ್ಧತಿಗಳನ್ನು ನಿರ್ವಹಣೆ ಮಾಡಲು ಕೇಂದ್ರ ಸರ್ಕಾರ ಈ ಹಿಂದೆ Indian Medicine Central Council Act 1970ನ್ನು (IMCC) ರಚಿಸಿರುತ್ತದೆ. ಭಾರತ ದೇಶದಲ್ಲಿ ಭಾರತೀಯ ವೈದ್ಯ ಪದ್ಧತಿಗಳಲ್ಲಿ ವಿದ್ಯಾಭ್ಯಾಸ ವೃತ್ತಿಪರತೆ ಹಾಗೂ ಈ ಪದ್ಧತಿಗಳ ಅಭಿವೃದ್ಧಿ, ಸಂಶೋಧನೆ ಮತ್ತು ವಿಸ್ತರಣೆಗಳನ್ನು ಈ ಕಾಯ್ದೆಯಡಿಯಲ್ಲಿ 2020ರ ವರೆಗೂ ನಿರ್ವಹಣೆ ಮಾಡಲಾಗುತ್ತಿತ್ತು. ತದ ನಂತರ ಕೇಂದ್ರ ಸರ್ಕಾರ National Commission for Indian System of Medicine (NCISM) Act 2020 ಜಾರಿಗೆ ತಂದು ಈ ಹಿಂದೆ ಇದ್ದಂತಹ IMCC Act ನ್ನು ನಿರಸನ ಮಾಡಿರುತ್ತದೆ ಆದರೆ ಈ ಹಿಂದೆ IMCC ಕಾಯ್ದೆಯಲ್ಲಿ ತೆಗೆದುಕೊಂಡ ಎಲ್ಲಾ ಕ್ರಮಗಳನ್ನು ಈ NCISM Act ನಲ್ಲಿ ಸಂರಕ್ಷಿಸಲಾಗಿದೆ.

ಆಯುರ್ವೇದ ಪದ್ಧತಿಯಲ್ಲಿ ವೈದ್ಯ ವೃತ್ತಿ ನಡೆಸಲು ಪ್ರಮಾಣ ಪತ್ರ ನೀಡುವ ಬಗ್ಗೆ ಭಾರತ ಸರ್ಕಾರದ National Commission for Indian System of Medicine (NCISM) ನವದೆಹಲಿ ಇವರ ಅಧಿನಿಯಮ-2020ರ ಕಲಂ 34 ರಲ್ಲಿ ಕೆಳಕಂಡಂತೆ ತಿಳಿಸಿದೆ.

"34 (1) No person other than a person who is enrolled in the State Register or the National Register, as the case may be, shall-
(a) be allowed to practice Indian System of Medicine as a qualified Practitioner ..............."

"34 (2) Any person who acts in contravention of the provisions of this section shall be Punished with imprisonment for a term which may extend to one year, or with fine which may extend to five lakh rupees, or with both".

..2/-

ನಮ್ಮ ರಾಜ್ಯದಲ್ಲಿ 1962ರಲ್ಲಿ The Karnataka Ayurvedic, Naturopathy, Sidda, Unani and Yoga Practitioners Miscellaneous Provisions Act,1961 ತದನಂತರ The Karnataka Ayurvedic, Naturopathy, Sidda, Unani and Yoga Practitioners Miscellaneous Provisions Rules, 1964 ಜಾರಿಗೆ ಬಂದಿರುತ್ತವೆ. ಇದರಲ್ಲಿ ಸಾಂಸ್ಥಿಕವಾಗಿ ವಿದ್ಯಾರ್ಹತೆಯನ್ನು ಹೊಂದಿಲ್ಲದವರಿಗೂ Practicing experience ಅಡಿಯಲ್ಲಿ ನೋಂದಣಿಗೆ ಅವಕಾಶ ಕಲ್ಪಿಸಲಾಗಿರುತ್ತದೆ. ಆದರೆ, ಜನಸಾಮಾನ್ಯರಿಗೆ ಸುರಕ್ಷಿತ ವೈದ್ಯಕೀಯ ಸೇವೆ ನೀಡುವ ಉದ್ದೇಶದಿಂದ ಕೇವಲ ಸಾಂಸ್ಥಿಕವಾಗಿ ವಿದ್ಯಾರ್ಹತೆ ಹೊಂದಿರುವವರಿಗೆ ಅವಕಾಶ ನೀಡುವ ಉದ್ದೇಶದಿಂದ KAUP ಕಾಯ್ದೆ ಕಲಂ 21ಕ್ಕೆ ತಿದ್ದುಪಡಿ ತಂದು Practicing experience ಹೊಂದಿರುವವರಿಗೆ ದಿನಾಂಕ: 31-12-1981ರವರೆಗೆ ಕಾಲ ಮಿತಿ ನೀಡಿ ನೋಂದಣಿಗೆ ಅವಕಾಶ ಕಲ್ಪಿಸಲಾಗಿರುತ್ತದೆ.

ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೈದ್ಯ ಮಂಡಳಿಯ ಕಾಯ್ದೆ 1961ರ ಕಲಂ 21 (1)ರಲ್ಲಿ ಈ ಕೆಳಕಂಡಂತೆ ತಿಳಿಸಿದೆ.

"Save as otherwise provided in section 16 and subject to the provisions of sections 23 and 25 on an after and expiry of [the 31st day of December, 1981], the name of any person shall not be entered in the register as a registered practitioner, unless he has passed qualifying examination as specified in the Schedule to this Act".

ತದನಂತರ ಇಂತಹ Practicing experience ಹೊಂದಿರುವವರಿಗೆ ನೋಂದಣಿ ಮಾಡಲು ಅವಕಾಶವಿರುವುದಿಲ್ಲ. ಆದ್ದರಿಂದ ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೈದ್ಯ ಮಂಡಳಿಯ ಕಾಯ್ದೆ 1961ರ ಕಲಂ 21ರನ್ವಯ ಆಯುಷ್ ವೈದ್ಯಕೀಯ ಕೋರ್ಸ್‌ಗಳಲ್ಲಿ (BAMS, BHMS, BUMS, BNYS) ವ್ಯಾಸಂಗ ಮಾಡದೇ ಹಾಗೂ ಪದವಿ ಪಡೆಯದೇ ಇರುವವರಿಗೆ ವೈದ್ಯ ವೃತ್ತಿ ನಡೆಸಲು ನೋಂದಣಿಗೆ ಅವಕಾಶವಿರುವುದಿಲ್ಲ. ಮುಂದುವರೆದು Karnataka Private Medical Establishment (KPME) Act & Rule ಪ್ರಕಾರ ಕೇವಲ KAUP ಮಂಡಳಿಯಲ್ಲಿ ನೋಂದಣಿ ಮಾಡಿಕೊಂಡಿರುವವರಿಗೆ ಮಾತ್ರ ವೈದ್ಯ ವೃತ್ತಿನಿರತರಾಗಲು ಅವಕಾಶವಿದೆ. ಆದರೆ, ಈ ಹಿಂದೇ 31-12-1981ರೊಳಗಾಗಿ KAUP ಮಂಡಳಿಯಲ್ಲಿ ನೊಂದಣಿ ಹೊಂದಿದವರಿಗೆ ವೈದ್ಯ ವೃತ್ತಿ ನಿರತರಾಗಿ ಮುಂದುವರೆಯಲು ಅವಕಾಶವಿದೆ.

ಮುಂದುವರೆದು Supreme Court of India Civil Appeal No.897 OF 2009 ರಲ್ಲಿ ಕೇರಳ ಆಯುರ್ವೇದ ಪಾರಂಪರಿಕ ವೈದ್ಯರ ವಿರುದ್ಧ ಕೇರಳ ಸರ್ಕಾರ ಮತ್ತು ಇತರರ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ದಿನಾಂಕ:13-04-2018ರಲ್ಲಿ ನೀಡಿದ ಆದೇಶದ ಸಾರಾಂಶ ಕೆಳಕಂಡಂತಿದೆ.

..3/-

"ಆಯುರ್ವೇದ ಪಾರಂಪರಿಕ ವೈದ್ಯರುಗಳು ಮಾನ್ಯತೆ ಹೊಂದಿದ ಮಹಾವಿದ್ಯಾಲಯಗಳು/ ಸಂಸ್ಥೆಗಳಿಂದ ಯಾವುದೇ [illegible] [illegible] ಪಡೆದ ಪ್ರಮಾಣ ಪತ್ರಗಳನ್ನು ಹೊಂದಿರುವುದಿಲ್ಲ. ಇಂತಹ ಪಾರಂಪರಿಕ ವೈದ್ಯರುಗಳಿಗೆ ವೈದ್ಯ ವೃತ್ತಿ ನಡೆಸಲು ಅನುಮತಿ ನೀಡಿದ್ದಲ್ಲಿ ಸಾರ್ವಜನಿಕರ ಪ್ರಾಣ ಹಾನಿಗಳು ಹಾಗೂ ಬಹಳಷ್ಟು ಚಿಕಿತ್ಸಾ ಸಮಸ್ಯೆಗಳು ಎದುರಾಗುವ ಸಾಧ್ಯತೆಗಳು ಇರುವುದರಿಂದ ವೈದ್ಯಕೀಯ ಕ್ಷೇತ್ರದಲ್ಲಿ ವಿದ್ಯಾರ್ಹತೆ ಇಲ್ಲದಿರುವಂತಹ ವ್ಯಕ್ತಿಗಳು ವೈದ್ಯ ವೃತ್ತಿ ನಡೆಸಲು ಅವಕಾಶವಿರುವುದಿಲ್ಲ ಎಂದು ಆದೇಶಿಸಿದೆ".

ಆದರೆ ಪಾರಂಪರಿಕವಾಗಿ ಆಯುರ್ವೇದ ಪದ್ಧತಿಯಲ್ಲಿ ಗುರುತಿಸಿಕೊಂಡಿರುವ ಪಾರಂಪರಿಕ ವೈದ್ಯರ ಮಕ್ಕಳಿಗೆ ರಾಜ್ಯ ಸರ್ಕಾರವು ಮೈಸೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿರುವ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಬಿ.ಎ.ಎಂ.ಎಸ್ ಪದವಿ ವ್ಯಾಸಂಗ ಮಾಡಲು ಪ್ರತಿ ವರ್ಷ ತಲಾ ಒಂದು ಸೀಟಿನಂತೆ ಸರ್ಕಾರಿ ಸೀಟನ್ನು ಮೀಸಲಿರಿಸಿದೆ.

(ಡಾ: ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಸಂಖ್ಯೆ: ಆಕುಕ 106 ಪಿಐಎಮ್ 2022